# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.30 ಕಾಡುಗೊಂಡನಹಳ್ಳಿಗೆ ಸಂಬಂಧಿಸಿದಂತೆ ದಿನಾಂಕ: 01-01-2022 ರಂದು ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.

<u>ಸಭೆಯಲ್ಲಿ ಹಾಜರಿದ್ದವರ ವಿವರ:-</u>

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ, | ಜಂಟಿ ನಿರ್ದೇಶಕರು ನಗರ ಯೋಜನೆ( ಸ್ಕ್ವಾಡ್) ಹಾಗೂ ನೋಡಲ್ಅಧಿಕಾರಿ& ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ-30 ಕೆ.ಜಿ.ಹಳ್ಳಿ |
| 2 | ಶ್ರೀಮತಿ.ಸಾವಿತ್ರಿ | ಸಹಾಯಕ ಅಭಿಯಂತರರು, & ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.30. ಕೆ.ಜಿ.ಹಳ್ಳಿ. |
| 3 | ಡಾ|| ದಿವ್ಯ.ಜಿ | ವೈಧ್ಯಾಧಿಕಾರಿಗಳು ,ಕೆ.ಜಿ.ಹಳ್ಳಿ UPHC |
| 4 | ಶ್ರೀ.ಚಂದ್ರಶೇಖರ್ | ಎ.ಎಸ್.ಐ, ಕೆ.ಜಿ.ಹಳ್ಳಿ ಸಂಚಾರಿ ಪೊಲೀಸ್ ಠಾಣೆ |
| 5 | ಶ್ರೀ.ಮಣಿ ಶಂಕರ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾ-30 |
| 6 | ಶ್ರೀ.ಮಂಜುನಾಥ್ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಶ್ರೀ.ವೆಂಕಟೇಶ್ | ತೋಟಗಾರಿಕೆ ಪರಿವೀಕ್ಷಕರು ಬಿಬಿಎಂಪಿ |
| 8 | ಶ್ರೀ.ಪಿ.ಚಂದ್ರಶೇಖರ್.ಜಿ.ಎಸ್ | HRPG |
| 9 | ಶ್ರೀ.ರಾಜೇಂದ್ರ | ಕೆ.ಜಿ.ಹಳ್ಳಿ ವಾರ್ಡ್ ಬ್ಲಾಕ್ ಅಧ್ಯಕ್ಷರು |
| 10 | ಶ್ರೀಮತಿ.ಸುಮಿತ್ರ | ಕೆ.ಜಿ.ಹಳ್ಳಿ ವಾರ್ಡ್ ಬ್ಲಾಕ್ ಅಧ್ಯಕ್ಷರು |
| 11 | ಶ್ರೀಮತಿ.ಶೈಲಾ | ವಾರ್ಡ್ ಮಹಿಳಾ ಬ್ಲಾಕ್ ಅಧ್ಯಕ್ಷರು |
| 12 | ಶ್ರೀ.ಎರ್ರನ್ | ಸಾರ್ವಜನಿಕರು |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಹೊಸ ವರ್ಷದ ಶುಭಾಷಯಗಳೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

(ಮು.ತಿ.ನೋ)

1) **ದಿನಾಂಕ: 18-12-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮ.**

ಸಭೆಯ ನಡಾವಳಿಯಂತೆ ವಿಷಯ ಸಂಖ್ಯೆ:3 ರ ಸಂಬಂದ ಕ್ರಮ ವಹಿಸಲಾಗಿದೆ. ಕ್ರಮ ಸಂಖ್ಯೆ:.4 ರ ಸಂಬಂದ ಭಗಶಃ ಕ್ರಮ ವಹಿಸಲಾಗಿದೆ.ಇನ್ನು ಉಳಿದ ಕ್ರಮ ಸಂಖ್ಯೆ:1,2,5,6,7,8 ಮತ್ತು 9 ರ ಸಂಬಂದ ಕ್ರಮ ವಹಿಸದೇ ಬಾಕಿ ಇರುವುದರಿಂದ ಕೂಡಲೇ ಕ್ರಮ ವಹಿಸುವಂತೆ ಸೂಚಿಸಲಾಗಿದೆ.

2) **ಬೀದಿ ದೀಪಗಳ ನಿರ್ವಹಣೆ ಬಗ್ಗೆ:-** ವಾರ್ಡ್ ವ್ಯಾಪ್ತಿಯ ನರಸಿಂಹ ಲೇಔಟ್ 1 ನೇ ಅಡ್ಡರಸ್ತೆಯಲ್ಲಿ ಬೀದಿ ದೀಪಗಳನ್ನು ದುರುಸ್ಥಿ ಪಡಿಸಲು ಶ್ರೀ. ತಂಗರಾಜ್ ರವರು ತಿಳಿಸಿರುತ್ತಾರೆ. ಹಾಗೂ ವಾರ್ಡ್ ವ್ಯಾಪ್ತಿಯ ಪ್ರದೇಶವಾರು ಬೀದಿ ದೀಪಗಳ ದುರಸ್ಥಿ ಪಡಿಸಲು ಶ್ರೀ.ರಾಜೇಂದ್ರ ವಾರ್ಡ್‌ನ ಬ್ಲಾಕ್ ಅಧ್ಯಕ್ಷರು ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಶ್ರೀ.ಮೋಹನ್ ವಿದ್ಯುತ್ ದೀಪಗಳ ನಿರ್ವಹಣೆ ಗುತ್ತಿಗೆದಾರರ ಪ್ರತಿನಿಧಿ ರವರಿಗೆ ಸಂಜೆ 6.00 ಗಂಟೆಯ ನಂತರ ಬೀದಿ ದೀಪಗಳನ್ನು ಪರಿವೀಕ್ಷಣೆ ಮಾಡಿ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ವಿಭಾಗ ಬಿ.ಬಿ.ಎಂ.ಪಿ) ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**(ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ವಿಭಾಗ ಬಿ.ಬಿ.ಎಂ.ಪಿ)**

3 **ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-** ವಾರ್ಡ್ ವ್ಯಾಪ್ತಿಯಲ್ಲಿ 1 ನೇ ಕ್ರಾಸ್, ನರಸಿಂಹಯ್ಯ ಲೇಔಟ್ ಕಾವೇರಿ ನೀರು ಬರದೇ ಇರುವ ಬಗ್ಗೆ ಶ್ರೀ.ತಂಗರಾಜು ರವರು ತಿಳಿಸಿರುತ್ತಾರೆ ಹಾಗೂ ಮೆಕ್ಕಾ ಮಸ್ಜೀದ್ 'ಸಿ' ಕ್ರಾಸ್‌ನಲ್ಲಿ ಸ್ಯಾನಿಟರಿ ಬ್ಲಾಕ್ ಆಗಿರುವ ಬಗ್ಗೆ ಶ್ರೀ.ರಾಜೇಂದ್ರ ವಾರ್ಡ್‌ನ ಬ್ಲಾಕ್ ಅಧ್ಯಕ್ಷರು ರವರು ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಶ್ರೀ.ಮಂಜುನಾಥ್ Water Inspector ರವರಿಗೆ ಸ್ಥಳಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿ ನೀಡಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**(ಕ್ರಮ :- ಸ.ಕಾ.ಅ.ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್‌ಟೌನ್)**

4 **ಘನತ್ಯಾಜ್ಯ ನಿರ್ವಹಣೆ:-** ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಶ್ರೀ.ಸಜ್ಜು ರವರು ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಘನತ್ಯಾಜ್ಯ ನಿರ್ವಹಣೆಯ ಸೂಪರ್‌ವೈಸರ್ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**(ಕ್ರಮ :-ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)**

5 **ಆರೋಗ್ಯ ವೈದ್ಯಾಧಿಕಾರಿಗಳು:-** ವಾರ್ಡ್ ವ್ಯಾಪ್ತಿಯಲ್ಲಿ ವಯಸ್ಸು 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಕೋವಿಡ್-19 ಲಸಿಕೆಯನ್ನು ಸರ್ಕಾರಿ ಅನುಮೋದಿತ ಶಾಲೆಗಳಲ್ಲಿ ನೀಡಲು ಪ್ರಾರಂಭಿಸಲಾಗುವುದು, ಪಲ್ಸ್ ಪೋಲೀಯೋ ಲಸಿಕೆಯ ಕಾರ್ಯಕ್ರಮವು ಹಮ್ಮಿಕೊಳ್ಳಲಾಗುವುದು ಹಾಗೂ ಶಾಲೆಗಳು ಮತ್ತು ಗಾರ್ಮೆಂಟ್ಸ್‌ಗಳಲ್ಲಿ ಓಮಿಕ್ರಾನ್ ಸಾಂಕ್ರಾಮಿಕ ರೋಗದ ಸಂಬಂದ ತಪಾಸಣೆ ಮಾಡಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಶ್ರೀಮತಿ.ದಿವ್ಯಾ ವೈದ್ಯಾಧಿಕಾರಿ ರವರು ತಿಳಿಸಿರುತ್ತಾರೆ. ಹಾಗೂ ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಮರಣ ಹೊಂದಿರುವ 34 ಎ.ಪಿ.ಎಲ್ ಕಾರ್ಡ್ ಮತ್ತು ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಕುಟುಂಬದವರನ್ನು ಗುರುತಿಸಲಾಗಿದೆ. ಅದರಲ್ಲಿ ಒಂದು ಕುಟುಂಬದವರಿಗೆ ಪರಿಹಾರ ಧನವನ್ನು ನೀಡಲಾಗಿರುತ್ತದೆ ಎಂದು ಸಭೆಯಲ್ಲಿ ಹಾಜರಿದ್ದ ಶ್ರೀ. ಮಣಿಶಂಕರ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ತಿಳಿಸಿರುತ್ತಾರೆ. ಉಳಿದ ಕುಟುಂಬದವರಿಗೆ ಪರಿಹಾರ ಧನವನ್ನು ನೀಡುವ ಸಂಬಂದ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ

ಮೇಲ್ಕಂಡ ವಿಷಯಗಳ ಬಗ್ಗೆ ಆರೋಗ್ಯ ವೈದ್ಯಾಧಿಕಾರಿಗಳಿಗೆ ಕ್ರಮಕೈಗೊಳ್ಳಲು ತಿಳಿಸಲು ನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.

**(ಕ್ರಮ:- ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)**

6 <u>ಸಂಚಾರಿ ಪೋಲೀಸ್ ಇಲಾಖೆ-</u> ವಾರ್ಡ್ ವ್ಯಾಪ್ತಿಯಲ್ಲಿ ಪಿಳ್ಳಣ್ಣಗಾರ್ಡನ್‌ನ 9ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ ಮತ್ತು 3ನೇ ಮುಖ್ಯರಸ್ತೆಗಳಲ್ಲಿ ಹಳೆಯ ಅನುಪಯುಕ್ತ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಿರುವುದನ್ನು ತೆರವುಗೊಳಿಸಲು ಶ್ರೀ.ಪಿ.ಚಂದ್ರಶೇಖರ್ ರವರು ಸಭೆಯಲ್ಲಿ ಕೋರಿದ್ದು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.
<u>(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಸಂಚಾರಿ ಪೋಲೀಸ್‌ಠಾಣೆ)</u>

7 <u>ಕಾನೂನು ಸುವ್ಯವಸ್ಥೆ (ಪೋಲೀಸ್ ಇಲಾಖೆ)-</u> ವಾರ್ಡ್ ವ್ಯಾಪ್ತಿಯ ರೈಲ್ವೆ ಗೇಟ್ ಹತ್ತಿರ ಮೊಬೈಲ್ ಕಳ್ಳತನ ಮಾಡಿರುವುವವರನ್ನು ಹಿಡಿದಿರುವ ಬಗ್ಗೆ ಹಾಗೂ ಯೂನಿಸ್ ಸ್ಕೂಲ್‌ನ ವಿದ್ಯಾರ್ಥಿಗಳಿಗೆ, ಕಳ್ಳತನ, ದರೋಡೆ, Eve-teasing ಮಾಡುವವರ ಬಗ್ಗೆ ಎಚ್ಚರಿಕೆ ವಹಿಸಲು Awareness Programme ಮಾಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ.ಚಂದ್ರಶೇಖರ್ ಎ.ಎಸ್.ಐ. ರವರು ತಿಳಿಸಿರುತ್ತಾರೆ. ಸದರಿ ಕ್ರಮವನ್ನು ಸಭೆಯಲ್ಲಿ ಅಭಿನಂದಿಸಲಾಯಿತು. ವಾರ್ಡ್ ವ್ಯಾಪ್ತಿಯಲ್ಲಿನ ಶಾಲೆಗಳ ಸುತ್ತಲೂ ಶಾಲೆ ಪ್ರಾರಂಭವಾಗುವ ಸಮಯ ಹಾಗೂ ಬಿಡುವ ಸಮಯದಲ್ಲಿ ಪೋಲೀಸ್ ಇಲಾಖೆಯಿಂದ ಗಸ್ತು ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.
<u>(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್‌ಠಾಣೆ)</u>

ಮುಂದುವರೆದು ದಿನಾಂಕ: 01-01-2021 ರಂದು ವಾರ್ಡ್ ಸಮಿತಿ ಸಭೆಗೆ ಗೈರುಹಾಜರಾಗಿರುವ ಅರಣ್ಯಾಧಿಕಾರಿಗಳು, ಲೇಬರ್ ಇನ್ಸ್‌ಪೆಕ್ಟರ್ ಕಾರ್ಮಿಕ ಇಲಾಖೆ ಮತ್ತು ಸ್ಲಂ ಬೋರ್ಡ್ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೇ ಹಾಜರಾಗಲು ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.

ಈ ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

04/01/2022

ಸಹಾಯಕಅಭಿಯಂತರರು ಹಾಗೂ
ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

04/01/2022

ಜಂಟಿ ನಿರ್ದೇಶಕರು ನಗರಯೋಜನೆ(ಸ್ಕ್ವಾಡ್)
ಹಾಗೂ ನೋಡಲ್‌ಅಧಿಕಾರಿ& ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

<u>ಪ್ರತಿಯನ್ನು:</u>

1. ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾಕ್ಷೇತ್ರ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರಕಛೇರಿರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಪೂರ್ವ) ರವರಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರಕ್ರಮಕ್ಕಾಗಿಕಳುಹಿಸಿದೆ.
6. ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಕೊಳಚೆ ನಿರ್ಮೂಲನ ಮಂಡಳಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ- ವಿಭಾಗ ಪಿಳ್ಳಣ್ಣಗಾರ್ಡನ್ ಕೆ.ಜಿ.ಹಳ್ಳಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

4...

10. ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೋರ್‌ವೆಲ್ ಉಪ-ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ,ಡಬ್ಲ್ಯೂ.ಎಸ್.ಎಸ್.ಬಿ ಫ್ರೇಜರ್‌ಟೌನ್ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15. ಉಪ-ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
16. ಲೇಬರ್‌ಇನ್ಸ್‌ಪೆಕ್ಟರ್‌ಕಾರ್ಮಿಕ ಇಲಾಖೆ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
17. ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್‌ಠಾಣೆರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
18. ತೋಟಗಾರಿಕೆ ಅಧೀಕ್ಷಕರು ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
19. ತೋಟಗಾರಿಕೆ ಸಹಾಯಕ ನಿರ್ದೇಶಕರು ಬಿ.ಡಿ.ಎ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
20. ಕಛೇರಿ ಕಡತಕ್ಕೆ.